ಸಿಕ್ಕುವುದಿಲ್ಲ. ಆದ್ದರಿಂದ ಆಲಿಪುರ ನಾಲಾ ಮತ್ತು ಮಲಕಾಪಲ್ಲಿ ನಾಲಗಳನ್ನು ಒಟ್ಟಿಗೆ ಸೇರಿಸಿ ಮದವಾರ್ ಸೈಟ್ ಸೆಲೆಕ್ಟ್ ಮಾಡಿ ಕಮಲಾವತಿ ನಾಲೆ ಕಟ್ಟಬೇಕೆನ್ನುವ ಅಭಿಪ್ರಾಯ ಇದೆ. ಇದರ ಬಗ್ಗೆ ಪ್ರಿಲಿವಿನರಿ ಸರ್ವೇ ನಡೆಸುವುದಕ್ಕೆ ಪ್ರಾರಂಭ ಮಾಡಲಾಗಿದೆ. ಕಾಗಣಾ ಯೋಜನೆ ಬಗ್ಗೆ ಈಗಾಗಲೇ ಸೆಂಟ್ರಲ್ ವಾಟರ್ ಅಂಡ ಪವರ್ ಕಮಿಷನಗೆ ಕಳುಹಿಸಿದ್ದೇವೆ. ಇದನ್ನು ಮಾಡುವುದಕ್ಕಿ ಸರ್ಕಾರಕ್ಕೆ ಆಸಕ್ತಿ ಇದೆ. ಆದಕ್ಕೆ ಅವರು 7ನೇ ಪಂಚವಾರ್ಷಿಕ ಯೋಜನೆಯಲ್ಲೂ ಇದನ್ನು ಸೇರಿಸಲು ಸಾಧ್ಯವಿಲ್ಲ, ಈಗ ಪ್ರಗತಿಯಲ್ಲಿರುವ ಯೋಜನೆಗಳನ್ನು ಮಾತ್ರ ಮುಗಿಸುತ್ತೇವೆ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದು ಬೇಡವೆಂದು ಕಾರಣವಾಗಿ ಹೇಳಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.-- ಕಾಗಣಾ ಯೋಜನೆ ಬಗ್ಗೆ ಕೇಂದ್ರ ಸರ್ಕಾರ್ಕೆ ಕಳುಹಿಸಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು ಕಾಗಣಾ ಯೋಜನೆ ಬಗ್ಗೆ ಹೇಳಬೇಕೆಂದರೆ ಆ ಪ್ರದೇಶದಲ್ಲಿ ಸಿಮೆಂಟ್ ಫ್ಯಾಕ್ಟರಿ ಹಾಗೂ ಥರ್ಮಲ್ ಪ್ರಾಜೆಕ್ಟ ಎಲ್ಲಾ ಬರುತ್ತಿವೆ ಇವುಗಳ ಜೊತೆಗೆ ಸಾವಿರಾರು ರೈತರ ಒಂದು ತೊಂದರೆಯನ್ನೂ ಸಹಾ ತಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.-- ಎಲ್ಲಾ ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಪ್ರಾಜೆಕ್ಟ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುತ್ತದೆ.

ಭದ್ರಾವತಿಯ ಭದ್ರಾ ನದಿಗೆ ಕಟ್ಟಿರುವ ಸೇತುವೆಯ ಬಗ್ಗೆ

280 (778) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ --

ಅ) ಭದ್ರಾವತಿಯ ಭದ್ರಾ ನದಿಗೆ ಅಡ್ಡಲಾಗಿ ಸೇತುವೆಯ ನಿರ್ಮಾಣ ಕಾಮಗಾರಿಕೆಯನ್ನು ಯಾವಾಗ ಪೂರ್ತಿಗೊಳಿಸಲಾಯಿತು.

ಆ) ಸದರಿ ಸೇತುವೆಯ ನಿರ್ಮಾಣಕಾರ್ಯ ಪೂರ್ತಿಗೊಂಡಿದ್ದು ಸದರಿ ಸೇತುವೆಯನ್ನು ಸಂಚಾರಕ್ಕೆ ಈವರೆಗೆ ಬಿಡುಗಡೆ ಮಾಡದಿರಲು ಕಾರಣವೇನು ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).-- .

ಅ) ಸೇತುವೆಯ ನಿರ್ಮಾಣ ಕಾರ್ಯವನ್ನು 1983ನೇ ಅಕ್ಟೋಬರ್‌ನಲ್ಲಿ ಪೂರ್ತಿಗೊಳಿಸಲಾಯಿತು.

ಆ) ಉಪಾಗಮನ ರಸ್ತೆಯ ಕಾರ್ಯವು ಪೂರ್ತಿಗೊಂಡಿಲ್ಲದ ಕಾರಣ ಸೇತುವೆಯನ್ನು ಸಂಚಾರಕ್ಕೆ ಬಿಡುಗಡೆ ಮಾಡಲಾಗಲಿಲ್ಲ ಉಪಾಗಮನ ರಸ್ತೆಯ ಕಾರ್ಯಕ್ಕೆ ಬೇಕಾದ ಭೂಮಿಯನ್ನು ಪರಸ್ಪರ ಒಪ್ಪಂದದ ಮೇಲೆ ಸ್ವಾಧೀನ ತೆಗೆದುಕೊಳ್ಳಲಾಗಿದ್ದು, ಭೂಮಿಯು ಇಲಾಖೆಯ ವಶದಲ್ಲಿದೆ. ಬಹಿರಂಗ ಟೆಂಡರುಗಳನ್ನು ಕರೆದು ಅಭಿಕರ್ಣವನ್ನು ಸ್ಥಿರಗೊಳಿಸಲಾಗಿದೆ. ಉಪಾಗಮನ ರಸ್ತೆಯ ಕಾರ್ಯವು ಪ್ರಗತಿಯಲ್ಲಿದ್ದು ಪೂರ್ತಿಗೊಂಡ ಮೇಲೆ ಸೇತುವೆಯನ್ನು ಸಂಚಾರಕ್ಕೆ ಬಿಡುಗಡೆ ಮಾಡಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.--ಭದ್ರಾವತಿಯ ಬಸ್ ಸ್ಟ್ಯಾಂಡ್ ಪಕ್ಕದಲ್ಲಿ ಸೇತುವೆ ನಿರ್ಮಾಣ ಕಾರ್ಯ ಮುಗಿದು 3 ವರ್ಷ ಆಗಿದೆ ಆದರೆ ಅಲ್ಲಿ ಇನ್ನೂ ಸಂಚಾರ ಮಾಡಲು ಸೇತುವೆಯನ್ನು ತೆರವು ಮಾಡಿಲ್ಲ. ತಾವು ಈಗ ಊರಿನ ಹೊರಗಡೆ ಏನು ಸೇತುವೆ ನಿರ್ಮಾಣ ಆಗಿದೆ ಅದರ ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.--ಬಸ್ ಸ್ಟ್ಯಾಂಡ್ ಪಕ್ಕದಲ್ಲಿರುವ ಸೇತುವೆ ಎಂದು ತಾವು ಹೇಳುತ್ತಿದ್ದೀರಿ. ಎಂದರೆ ಅಲ್ಲಿ ಎರಡು ಸೇತುವೆಗಳು ಇವೆಯೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.--ಭದ್ರಾವತಿಯ ಬಸ್ ನಿಲ್ದಾಣದ ಪಕ್ಕದಲ್ಲಿಯೇ ಒಂದು ಸೇತುವೆ ನಿರ್ಮಾಣ ಮಾಡಿ 3 ವರ್ಷಗಳಾಗಿವೆ. ತಾವು ಊರ ಹೊರಗಡೆ ಇರುವ ಸೇತುವೆ ಬಗ್ಗೆ ಏನು ಉತ್ತರ ಕೊಟ್ಟಿದ್ದೀರಿ ಅದು ಸರಿ ಇದೆ.

ಶ್ರೀ ಎಚ್. ಡಿ. ದೇವೇಗೌಡ.--ತಾವು ಏನು ಬಸ್ ಸ್ಟ್ಯಾಂಡ್ ಪಕ್ಕದಲ್ಲಿರುವ ಸೇತುವೆ ಬಗ್ಗೆ ಹೇಳುತ್ತಿದ್ದೀರಿ, ಆ ಬಗ್ಗೆ ನಾನು ಪರಿಶೀಲನೆ ಮಾಡಿ ನೋಡುತ್ತೇನೆ.

ಯಗಚಿ ನೀರಾವರಿ ಯೋಜನೆ ಬಗ್ಗೆ

281 (788) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.--

ಆ) ಯಗಚಿ ಅಣೆಕಟ್ಟು ನಿರ್ಮಾಣ ಯೋಜನೆ ರಾಜ್ಯ ಸರ್ಕಾರದವರ ಮಂಜೂರಾತಿ ದೊರತಿದೆಯೆ ; ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ವೆಚ್ಚವೆಷ್ಟು ; ಹಾಗೂ ಈ ಯೋಜನೆಯಿಂದ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು ;

ಆ) ಈ ಯೋಜನೆಯಿಂದ ಮುಳುಗಡೆಯಾಗುವ ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಮುಳುಗಡೆ ಹೊಂದುವ ತರಿ, ಖುಷ್ಕಿ ಮತ್ತು ಬಾಗಾಯ್ತು ಜಮೀನಿನ ವಿಸ್ತೀರ್ಣವೆಷ್ಟು ;

ಇ) ಈ ಯೋಜನೆಯಿಂದ ಯಾವ ಯಾವ ತಾಲೂಕಿನ ಎಷ್ಟು ಎಕರೆ ಪ್ರದೇಶಕ್ಕೆ ಪ್ರಯೋಜನವಾಗುತ್ತದೆ

ಈ) ಅರಸೀಕೆರೆ ತಾಲೂಕಿನ ನೀರಿನ ಸಮಸ್ಯೆ ಬಗೆಹರಿಸಲು ಯಗಚಿ ಅಣೆಕಟ್ಟಿನಿಂದ ನೀರಾವರಿ ಸೌಲಭ್ಯ ಒದಗಿಸಲು ಯೋಚಿಸಲಾಗಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಆ) ಇಲ್ಲ.

ಅಂದಾಜು ವೆಚ್ಚ : 1983-84ರ ಹರಪಟ್ಟಿಯ ಮೇಲೆ 3538 ಲಕ್ಷ ರೂಪಾಯಿಗಳು.
ನೀರಾವರಿ ಆಗುವ ಪ್ರದೇಶ: 21450 ಹೆಕ್ಟೇರುಗಳು (53,000 ಎಕರೆಗಳು)

ಆ) ಹನ್ನೆರಡು ಹಳ್ಳಿಗಳು.

ಮುಳುಗಡೆಯಾಗುವ ಪ್ರದೇಶ :

1) ತರಿ ಜಮೀನು	:	1214 ಹೆಕ್ಟೇರುಗಳು	(3000 ಎಕರೆಗಳು)
2) ಖುಷ್ಕಿ ಜಮೀನು	:	404 ಹೆಕ್ಟೇರುಗಳು	(1000 ಎಕರೆಗಳು)
3) ಬಾಗಾಯ್ತು	:	19 ಹೆಕ್ಟೇರುಗಳು	(46 ಎಕರೆಗಳು)

ಇ) ತಾಲ್ಲೂಕುವಾರು ನೀರಾವರಿಯಾಗುವ ಪ್ರದೇಶ :

1)	ಬೇಲೂರು ತಾಲ್ಲೂಕು	:	6680 ಎಕರೆಗಳು
2)	ಆಲೂರು ತಾಲ್ಲೂಕು	:	2400 ಎಕರೆಗಳು
3)	ಹಾಸನ ತಾಲ್ಲೂಕು	:	36190 ಎಕರೆಗಳು
4)	ಹೊಳೆನರಸಿಪುರ ತಾಲ್ಲೂಕು	:	7730 ಎಕರೆಗಳು
			53,000 ಎಕರೆಗಳು

ಹಳ್ಳಿಗಳ ವಿವರಗಳ ಬಗ್ಗೆ ಮಾಹಿತಿ ಇನ್ನು ಪಡೆಯಬೇಕಾಗಿದೆ.

ಈ) ಇಲ್ಲ.

ಶ್ರೀ ಜಿ. ಎಸ್. ಬಸವರಾಜು.--ಅಧ್ಯಕ್ಷರೇ, ಈ ಒಂದು ಯೋಜನೆ ಕೆಳಗೆ ಚೆನ್ನರಾಯಪಟ್ಟಣ ಸೇರಿಲ್ಲವೆಂಬುದು ನನ್ನ ಅಭಿಪ್ರಾಯ. ಹಾಗೂ ಯಗಚಿ ಅಣೆಕಟ್ಟು ನಿರ್ಮಾಣ ಯೋಜನೆಗೆ ಸರ್ಕಾರದ ಮಂಜೂರಾತಿ ದೊರೆತಿಲ್ಲವೆಂದು ಸರ್ಕಾರದಿಂದ ಉತ್ತರ ಬಂದಿದೆ. ಹಾಗೂ ಅರಸೀಕೆರೆ ತಾಲ್ಲೂಕಿಗೆ ಇದರ ಒಂದು ಪ್ರಯೋಜನವನ್ನು ಒದಗಿಸುವ ಒಂದು ಯೋಚನೆ ಇಲ್ಲವೆಂದು ತಿಳಿದುಬಂದಿದೆ. ಯಗಚಿ ಹೊಳೆ ಹರಿಯುವ ಸುಮಾರು 3 ಸಾವಿರದ 300 ಕಾಂಟೂರ್ಸ್‌ನಲ್ಲಿ ಸುಮಾರು 2,500 ರಿಂದ 2,600 ರಷ್ಟು ನಮ್ಮ ತಾಲ್ಲೂಕಿನಲ್ಲೇ ಇದ್ದು ಈ ಬಗ್ಗೆ ಏಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ ? ಹಾಗೂ ಇದರ ಪ್ರಯೋಜನ ಚೆನ್ನರಾಯಪಟ್ಟಣಕ್ಕೂ ಕೂಡಾ ದೊರೆಯುವುದಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.--ಅಧ್ಯಕ್ಷರೇ, ಇವತ್ತು ಮಾಡಿರತಕ್ಕ ಯೋಜನೆಯ ಪೂರ್ಣ ವಿವರ ನೋಡಿದರೆ ಚೆನ್ನರಾಯಪಟ್ಟಣ ತಾಲ್ಲೂಕಿಗೆ ನೀರು ಬರುವುದಿಲ್ಲ. ಇನ್ನು ಅರಸೀಕೆರೆ ತಾಲ್ಲೂಕಿಗೂ ನೀರು ಕೊಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಕಾಂಟೂರ್ಸ್ ಲೆವಲ್‌ನ್ನು ಕೋಟ್ ಮಾಡಿ ಮಾತಸಾಡಿದರು. ನನಗೆ ಬಂದಿರತಕ್ಕ ವರದಿ ಪ್ರಕಾರ 1960ರಲ್ಲಿ ಈ ಬಗ್ಗೆ ಪ್ರಿಲಿಮನರಿ ಸರ್ವೇ ಆಗಿದೆ. ಆ ಸರ್ವೇ ಪ್ರಕಾರ ವೇದಾವತಿ, ವಾಣಿವಿಲಾಸ ಸಾಗರದಿಂದ ಸುಮಾರು 2 ಟಿ. ಎಂ. ಸಿ ಚ. ಅಡಿಯಷ್ಟು ನೀರನ್ನು ಕೃಷ್ಣಾ ಬೇಸಿನ್‌ಗೆ ತೆಗೆದುಕೊಂಡು ಹೋಗುವ ಅಭಿಪ್ರಾಯವಿತ್ತು. ಬೇಲೂರು ತಾಲ್ಲೂಕಿನ ಕೆರಗೋಡು ಎಂಬಲ್ಲಿ ಕಟ್ಟಿಂಗ್ ಹೊಡೆದು ಯಗಚಿ ಮತ್ತು ವೇದಾವತಿ ನದಿಗೆ. ಈ ಬೆಸಿನ್‌ನಿಂದ ಆ ಬೇಸಿನ್‌ಗೆ ಟನಲ್ ಮೂಲಕ ನೀರು ತೆಗೆದುಕೊಂಡು ಹೋಗಬೇಕೆಂದು ಇತ್ತು. ಆಗಲೂ ಕೂಡಾ ಅರಸೀಕೆರೆ ತಾಲ್ಲೂಕಿಗೆ ನೀರು ಸಿಗುತ್ತಾ ಇರಲಿಲ್ಲ. ಮಾನ್ಯ ಸದಸ್ಯರು ಏನು ಕಾಂಟೂರ್ಸ್ ಬಗ್ಗೆ ಹೇಳುತ್ತಿದ್ದಾರೆ ಆ

ಬಗ್ಗೆ ಅವರು ಬೇಕಾದರೆ ಬರಲಿ, ಇಲಾಖೆಯ ಅಧಿಕಾರಿಗಳ ಜೊತೆ ಕುಳಿತು ಸಮಾಲೋಚನೆ ಮಾಡೋಣ. ಅವರು ಹೇಳುವ ರೀತಿ ಸರಿಹೊಂದುವುದು ಇದ್ದರೆ ಮತ್ತೊಂದು ಸಾರಿ ಯೋಚನೆ ಮಾಡೋಣ.

ಶ್ರೀ ಬಿ. ನಂಜಪ್ಪ —ಹಾಸನ ತಾಲ್ಲೂಕಿನ 36 ಸಾವಿರ ಎಕರೆಗಳು ನೀರಾವರಿ ಆಗುತ್ತದೆ ಎಂದು ಹೇಳಿದ್ದೀರಿ. ಇದರಲ್ಲಿದುದ ಹಾಗೂ ಸಾಲ್ಗಿಗ್ರಾಮ ಸೇರಿವಿಯೇ ? ಹಾಗೂ ಎಷ್ಟು ಎಕರೆ ಪ್ರದೇಶಕ್ಕೆ ಏತ ನೀರಾವರಿ ಮೂಲಕ ನೀರನ್ನು ಒದಗಿಸುತ್ತೀರಿ ?

ಶ್ರೀ ಎಚ್ ಡಿ ದೇವೇಗೌಡ.--ಲೋ ಲೆವಲ್‌ನಲ್ಲಿ ಹೆಚ್ಚು ಜಮೀನಿಗೆ ನೀರಾವರಿ ಒದಗಿಸಬೇಕು. ಹಾಗೂ ಆದರಿಂದ ಉಳಿದರೆ ಯಾವ ರೀತಿ ಅದನ್ನು ಉಪಯೋಗ ಮಾಡಿಕೊಳ್ಳಬಹುದು ಎಂಬ ಬಗ್ಗೆ ತಜ್ಞರು ತೀರ್ಮಾನ ಮಾಡಬೇಕಾಗುತ್ತದೆ. ನೀರಾವರಿ ಪ್ರದೇಶಕ್ಕೆ ನೀರನ್ನು ಒದಗಿಸಿ ಮಿಕ್ಕ ನೀರನ್ನು ಏತ ನೀರಾವರಿ ಮೂಲಕ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಯಗಚಿ ಪ್ರಾಜೆಕ್ಟ್ ಬಗ್ಗೆ ಕೂಡಾ ತಜ್ಞರ ಸಮಿತಿಯಲ್ಲನನ್ನೂ ಪರಿಶೀಲನೆಮಾಡಿ ತನ್ನ ಅಭಿಪ್ರಾಯನನ್ನು ಇಟ್ಟಿದಾರೆ ಈ ಬಗ್ಗೆ ಈ ವರ್ಷ 25 ಲಕ್ಷ ರೂಪಾಯಿ ಇಟ್ಟಿದ್ದೇವೆ. ಇದಕ್ಕೆ ಇನ್ನೂ ಅಡ್ಮಿನಿಸ್ಟ್ರೇಟಿವ್ ಕ್ಲಿಯರೆನ್ಸ್ ಕೊಟ್ಟಿಲ್ಲ. 1984-85ಕ್ಕೆ ಅಡ್ಮಿನಿಸ್ಟ್ರೇಟಿವ್ ಕ್ಲಿಯರೆನ್ಸ್ ಸರ್ಕಾರ ಪರಿಶೀಲನೆ ಮಾಡುತ್ತಿದೆ ಈ ವಿಷಯದ ಬಗ್ಗೆ ಸದಸ್ಯರಾದ ನಂಜಪ್ಪನವರನ್ನು ಹಾಗೂ ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ಇನತ್ತು ಇರತಕ್ಕ ಪರಿಸ್ಥಿತಿಯಲ್ಲಿ ಅವರು ಹೇಳಿದ್ದನ್ನು ಕಾರ್ಯಗತ ಮಾಡುವುದಕ್ಕೆ ಕಷ್ಟವಾಗುತ್ತದೆ.

ರಾಜ್ಯದಲ್ಲಿರುವ ಅರಣ್ಯ ರಕ್ಷಕರ ಬೇಡಿಕೆಗಳು

282 (794) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).-- ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ —

ಅ) ಕರ್ನಾಟಕ ರಾಜ್ಯ ಅರಣ್ಯ ರಕ್ಷಕರ ಸಂಘವು ಸರಕಾರಕ್ಕೆ ತಮ್ಮ ಬೇಡಿಕೆಗಳ ಬಗ್ಗೆ ಮನವಿ ಪತ್ರಗಳನ್ನೇನಾದರೂ ಸಲ್ಲಿಸಿದೆಯೆ :

ಆ) ಹಾಗಿದ್ದಲ್ಲಿ ಆ ಬೇಡಿಕೆಗಳಾವುವು ? ಮತ್ತು ಸದರಿ ಬೇಡಿಕೆಗಳ ಪೈಕಿ ಯಾವ ಯಾವ ಬೇಡಿಕೆಗಳನ್ನು ಈಡೇರಿಸಲಾಗಿದೆ ?

ಶ್ರೀ ಕೆ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು) --ಅ) ಹೌದು

ಆ) ಬೇಡಿಕೆಗಳ ಪಟ್ಟಿ ಲಗತ್ತಿಸಿದೆ. ಬೇಡಿಕೆಗಳು ಪರಿಶೀಲನೆಯಲ್ಲಿದೆ.

ಬೇಡಿಕೆಗಳ ಪಟ್ಟಿ

ಅರಣ್ಯ ರಕ್ಷಕರ ಬೇಡಿಕೆಗಳು ಈ ಕೆಳಕಂಡಂತಿವೆ.--

1) ಅರಣ್ಯ ರಕ್ಷಕರ ವೇತನ ಶ್ರೇಣಿಯನ್ನು ರೂ. 550-1050ಕ್ಕೆ ಏರಿಸುವುದು.

2) ಅರಣ್ಯ ವೀಕ್ಷಕರ ವೇತನ ಶ್ರೇಣಿಯನ್ನು ರೂ.490-950ಕ್ಕೆ ಏರಿಸುವುದು.

3) ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕರಿಗೆ ಉಚಿತವಾಗಿ ತಾಲ್ಲೂಕು ಕೇಂದ್ರಗಳು ಸೇರಿದಂತೆ ಎಲ್ಲಾ ಕಡೆಗಳಲ್ಲಿಯೂ ವಸತಿ ಗೃಹಗಳನ್ನು ಒದಗಿಸಿಕೊಡುವುದು.

4) ಅರಣ್ಯ ವೀಕ್ಷಕರ ಹುದ್ದೆಗಳನ್ನು ಖಾಯಂಗೊಳಿಸಿ ಸೇವಾ ಹಿರಿತನದ ಮೇಲೆ ಅವರಿಗೆ ಅರಣ್ಯ ರಕ್ಷಕರಾಗಿ ಬಡ್ತಿ ಅವಕಾಶ ಕಲ್ಪಿಸಿಕೊಡುವುದು.

5 ಅರಣ್ಯ ರಕ್ಷಕರಂತೆ ಅರಣ್ಯ ವೀಕ್ಷಕರಿಗೂ ಟೆರಿಕಾಟ್ ಹಾಗೂ ಹತ್ತಿ ಖಾಕಿ ಸಮವಸ್ತ್ರವನ್ನು ಒದಗಿಸುವುದು.

6) ಅರಣ್ಯ ರಕ್ಷಕರಿಗೆ ಈಗಾಗಲೇ ನಿಗದಿಪಡಿಸಿರುವ ಇಲಾಖೆಯ ಪರೀಕ್ಷೆಯನ್ನು ಪೋಲೀಸ್ ಇಲಾಖೆಯವರಂತೆ ಮನ್ನಾ ಮಾಡುವುದು.

7) ಹನ್ನೆರಡು ವರ್ಷಗಳ ಕಾಲ ಸತತವಾಗಿ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಅರಣ್ಯ ರಕ್ಷಕರಿಗೆ ಹಾಗೂ ವೀಕ್ಷಕರಿಗೆ ಯಾವುದು ಪರೀಕ್ಷೆ ನಿರ್ಬಂಧವನ್ನು ವಿಧಿಸದೆ ವಿದ್ಯಾ ಇಲಾಖೆಯ ಶಿಕ್ಷಕರಿಗೆ ನೀಡಿದ ವಿನಾಯಿತಿಯಂತೆ ಟ್ರೈವರ್ ಬಾಂಡ್ ಪ್ರಮೋಶನ್ ನೀಡುವುದು.

8) ಎಲ್ಲಾ ಅರಣ್ಯ ರಕ್ಷಕರು ಹಾಗೂ ವೀಕ್ಷಕರಿಗೆ ಅಧುನಿಕ ರೀತಿಯ ಆತ್ಮ ರಕ್ಷಣಾ ಆಯುಧ ಗಳನ್ನು ನೀಡುವುದು.

9) ಅರಣ್ಯ ರಕ್ಷಕರೂ ಹಾಗೂ ವೀಕ್ಷಕರಿಗೆ ಮಾಹೆಯಾನ ರೂಪಾಯಿ 200 ರೂಪೆ ನಿಗದಿತ ಪ್ರಯಾಣ ಭತ್ಯೆ ನೀಡುವುದು.